


ಎಡದಿಂದ ಬಲಕ್ಕೆ:

1. ದೀಪವನ್ನು ಕಂಡೊಡನೆ ಉತ್ತೇಜನ ಸಿಕ್ಕಿತು (4)
3. ಪರಿಹಾರ ತೋರಿಸುವ ಮೊದಲು ಆಶೀರ್ವದಿಸು (3)
4. ಇದೆಂಥ ರಚನೆ? ಬರೀ ವಿಕಾರ ನಿರ್ಮಿತಿ (3)
6. ತುತ್ತೂರಿ ತರಬೇಕೆಂದರೆ ಏಕಿಂಥ ಅವಸರ? (4)
8. ಪ್ರತಿ ಕಾಸನ್ನೂ ಕಟ್ಟಬೇಕೆಂದು ಪ್ರಚುರಪಡಿಸು (4)
10. ಅವನು ನುಡಿವ ಉಕ್ತಿಗಳಲ್ಲೆಲ್ಲ ಬರೀ ಪ್ರೀತಿ (4)
12. ಮನಸಾರ ಕಳಿಸಿದ್ದೇನು ಈ ವಂದನೆ? (4)
16. ಸುಂದರ ತೋರಣ ಕಟ್ಟಲು ಯುವಕನೇ ಸರಿ (3)
17. ವಾತ್ಸಲ್ಯ ತೋರಲು ವರ್ಷ ಬೇಕೇ? (3)
18. ತಿರುಗಿಸಿ ತಂದನಲ್ಲ, ಅದೆಲ್ಲ ಅಲ್ಲೇ ಅಂತರ್ಧಾನ (4)

ಮೇಲಿಂದ ಕೆಳಕ್ಕೆ:

1. ಉಷಃಕಾಲದಲ್ಲಿ ಕಂಡದ್ದೆಲ್ಲ ಬರೀ ಮರಳು (3)
2. ರುಜು ಮಾಡಿದನೆಂದು ಈ ಗೌರವ ಕಾಣಿಕೆಯೇ? (3)
3. ಹಳ್ಳ ತುಂಬುವ ಕಾರ್ಯಕ್ರಮ ಹೊಸತೇನಲ್ಲ, ಬಿಡಿ (3)
5. ತೇರನ್ನೇರುವ ಕನಸು ಕಂಡ ಅಲೆಮಾರಿ (3)
6. ತಮ್ಮನ ಆಸೆಗೆ ಒಪ್ಪಿಗೆ ಇಲ್ಲದ್ದು ತಲೆ ಕೆಳಗಾಯಿತು (4)
7. ಭಕ್ತಿಯಿರಿಸಿ ಮೊರೆನೆಸುವಲ್ಲಿ ಸಾಲದಿಂದ ಬಿಡುಗಡೆ ಸಿಕ್ಕಿತೇ? (4)
8. ಪರಿವ್ರಾಜಕನಿಂದ ನಡೆದದ್ದು ಧಾರ್ಮಿಕ ಉಪನ್ಯಾಸ (4)
9. ಸುಂದರಾಕಾರನ ಮುಂದೆ ಅಮೃತದ ಆಕರ (4)
11. ಹಾರುತ್ತಿದೆ ಸರಿ. ಆದರೆ ಹಿತ ಇಲ್ಲದಾಗಿದೆ (3)
13. ಮಂದ್ರ ಸ್ವರದ ಗಾನ–ಎಂಥ ಸಿಹಿ! (3)
14. ಆರತಿ ಮಾಡಲೇಬೇಕೆಂಬುದು ಅಣ್ಣನ ಆದೇಶ (3)
15. ವ್ಯಾಯಾಮವನ್ನು ಕಲಿಸಲು ಅನ್ಯದೇಶೀಯ ಬೇಕೇ? (3)

### ಪದಬಂಧ 18-10-2012 ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಭ್ಯುದಯ; 3. ಪ್ರಥಮ; 4. ಜಳಕ; 6. ರಜಾದಿನ; 7. ಪರಧನ; 8. ನಗರಿಗ; 10. ನಮ್ರನುಡಿ; 12. ಪಾಪಭೀತಿ; 14. ಬಡಿವಾರ; 16. ಪುತ್ಥಳಿ; 17. ಸಮೀಪ; 18. ಕಡೆಮನೆ.

ಮೇಲಿಂದ ಕೆಳಕ್ಕೆ:

1. ಅಮರ; 2. ಯಜನ; 3. ಪ್ರಸಾದನ; 5. ಕಡಗ; 7. ಪಲಾಯನ; 9. ಗಣಪತಿ; 11. ನುಣುಪು; 13. ಅಪರೂಪ; 14. ಬಳಿಕ 15. ರಸನೆ.

# ಪ್ರಶ್ನಾಂಕಣ

## ಅಗ್ನಿ ಪರ್ವತ-ಏಕೆ ಅಗತ್ಯ?

ಪ್ರಕೃತಿಯ ಪ್ರಳಯ ಶಕ್ತಿಯ ಪ್ರತಿಮೆಗಳಾಗಿಯೇ ಅಗ್ನಿಪರ್ವತಗಳು ಪ್ರಸಿದ್ಧ. ಶಿಲಾಪಾಕ ಹರಿಸಿ, ನೀರಾವಿ ಚಿಮ್ಮಿಸಿ, ರಾಶಿ ರಾಶಿ ಧೂಳೆಬ್ಬಿಸಿ... ಹಾಗೆಲ್ಲ ಸರ್ವನಾಶ ಹಚ್ಚುವ ಅಗ್ನಿಪರ್ವತಗಳೇ ಜ್ವಾಲಾಮುಖಿಗಳೆಂದೂ ಪರಿಚಿತ.

ಹಾಗೆಂದು ಅಗ್ನಿಪರ್ವತಗಳದು ಬರೀ ವಿನಾಶಕ ಪಾತ್ರ ಎಂದು ಭಾವಿಸಿ ಬಿಡಬೇಡಿ. ಭೂಮಿಯ ಸ್ವಾಸ್ಥ್ಯದಲ್ಲಿ ಅಗ್ನಿಪರ್ವತಗಳದು ಅತಿ ಮಹತ್ವದ ಬಹು ವಿಧ ಪಾತ್ರ. ಅತ್ಯಂತ ಮುಖ್ಯವಾಗಿ.

* ಭೂ ನೆಲದ ಎಲ್ಲ ಶಿಲೆಗಳಿಗೂ, ಹೊಸ ಹೊಸ ಶಿಲಾ ಸಾಮಗ್ರಿ ಸರಬರಾಜಿಗೂ ಅಗ್ನಿಪರ್ವತಗಳೇ ಆಕರ. ಅಗ್ನಿಪರ್ವತಗಳಿಂದ ಉಕ್ಕಿ ಹರಿವ ಶಿಲಾಪಾಕ ತಣಿದಾಗ ವಿಧ ವಿಧ ಅಗ್ನಿಶಿಲೆಗಳು ರೂಪುಗೊಳ್ಳುತ್ತವೆ. ಈ ಅಗ್ನಿಶಿಲೆಗಳೇ ಪದರ ಶಿಲೆಗಳಿಗೂ ರೂಪಾಂತರ ಶಿಲೆಗಳಿಗೂ ಮೂಲ ದ್ರವ್ಯ.



* ಭೂ ಅಂತರಾಳದಲ್ಲಿರುವ ಲೋಹಗಳನ್ನು ಖನಿಜಗಳನ್ನು ನಮ್ಮ 'ಕೆಗೆಟುಕುವಷ್ಟು' ಮೇಲಕ್ಕೆ ತಂದು ಹರಡುತ್ತಿರುವುದೂ ಜ್ವಾಲಾಮುಖಿಗಳೇ. ಅಗ್ನಿ ಪರ್ವತಗಳಿಲ್ಲದಿದ್ದರೆ ಹೊಸ ಹೊಸ ಶಿಲೆಗಳ ಖನಿಜ ನಿಧಿ–ನಿಕ್ಷೇಪಗಳ ಸರಬರಾಜು ಅಸಾಧ್ಯ.

* ಅಗ್ನಿಪರ್ವತಗಳಿಂದ ಚಿಮ್ಮಿ ವಾಯುಮಂಡಲಕ್ಕೆ ಸೇರುವ ವಿವಿಧ ಅನಿಲಗಳು ಭೂಮಿಯ ವಾತಾವರಣದ ಸಮತೋಲನಕ್ಕೆ ಅತ್ಯವಶ್ಯ. ವಾಸ್ತವ ಏನೆಂದರೆ ಭೂಮಿಯಲ್ಲಿ ಮೂಲತಃ ವಾಯುಮಂಡಲ ರೂಪುಗೊಳ್ಳಲು ಹಾಗೂ ಸಾಗರಗಳು ಮೈದಳೆಯಲು ಅಗ್ನಿಪರ್ವತಗಳೇ ಕಾರಣ. ಆದಿ ಭೂಮಿಯ ಅಂತರಾಳದಿಂದ ಆಗಿನ ಅಗ್ನಿಪರ್ವತಗಳು ಹೊರತಂದ ಅನಿಲಗಳಿಂದಲೇ ಆದಿ ವಾತಾವರಣ ಅವತರಿಸಿದ್ದು; ಹಾಗೆ ಹೊರಬಂದ ನೀರಾವಿಯೇ ತಣಿದು ಮಳೆಯಾಗಿ ಸುರಿದು ಮೂಲ ಜಲಧಿ–ಜಲನಿಧಿ ಮೈದಳೆದದ್ದು.

* ಅಗ್ನಿಪರ್ವತಗಳಿಂದ ಸುರಿವ ಧೂಳು ಸಸ್ಯ ಪೋಷಕ ಖನಿಜಗಳ ಭಂಡಾರ. ಮಳೆ ನೀರಲ್ಲಿ ಕರಗಿ ಮಣ್ಣಲ್ಲಿ ಬೆರೆತು ಈ ಜ್ವಾಲಾಮುಖಿ ಧೂಳು ಮಣ್ಣಿನ ಸಾರವನ್ನು ಹೆಚ್ಚಿಸಿ ಅಡವಿಗಳಲ್ಲೂ ಕೃಷಿ ಭೂಮಿಯಲ್ಲೂ ಸಸ್ಯಗಳನ್ನು ಪೋಷಿಸುತ್ತದೆ.

ಹೀಗೆಲ್ಲ ಆಗಿರುವುದರಿಂದಲೇ ಅಗ್ನಿಪರ್ವತಗಳ ಸ್ಫೋಟದಿಂದ ಸಂಭವಿಸುವ ವಿನಾಶಕ್ಕಿಂತ ಅವು ಸೃಜಿಸುವ ಉಪಯುಕ್ತತೆಯೇ ಬಹಳ ಅಧಿಕ. ಆದ್ದರಿಂದಲೇ ಅಗ್ನಿಪರ್ವತಗಳ ಅಸ್ತಿತ್ವ ಅತ್ಯಗತ್ಯ.

■ ಎನ್. ವಾಸುದೇವ್